# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆಸಂಖ್ಯೆ: 127

ಉತ್ತರಿಸಬೇಕಾದ ದಿನಾಂಕ: 28.01.2026

ಸದಸ್ಯರ ಹೆಸರು: ಶ್ರೀ ಪಿ. ಹೆಚ್. ಪೂಜಾರ್ (ಪದವೀಧರರ ಕ್ಷೇತ್ರ)

ಉತ್ತರಿಸುವ ಸಚಿವರು: ಕಂದಾಯ ಸಚಿವರು

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಮನೆಯ ಮುಖ್ಯಸ್ಥರ ಹೆಸರಿಗೆ ಇದ್ದ ಜಮೀನು ಅವರ ಮರಣಾನಂತರ ಅವರ ಮಕ್ಕಳ ಅಥವಾ ಅವರ ವಾರಸದಾರರ ಹೆಸರಿಗೆ ಮಗದೊಮ್ಮೆ ಖಾತೆ ಮಾಡಲು ಸರ್ಕಾರವು 2020ರಲ್ಲಿ ಪೌತಿ ಖಾತೆ ಜಾರಿಗೆ ತಂದಿದ್ದು, ಸದರಿ ಇ-ಪೌತಿ ಖಾತೆ ಯೋಜನೆಯು ಸಮರ್ಪಕವಾಗಿ ಜಾರಿಯಾಗದೇ ಪ್ರಗತಿ ಕುಂಠಿತಗೊಂಡ ಕಾರಣ ಜಮೀನು ಮಾಲೀಕರು ಬಹಳ ತೊಂದರೆಗಳನ್ನು ಅನುಭವಿಸುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಅದನ್ನು ಸರಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಸರ್ಕಾರದ ಸುತ್ತೋಲೆ ಸಂಖ್ಯೆ: ಕಂಇ 33 ಟಿಆರ್ ಎಂ 2019(ಇ), ದಿನಾಂಕ:17.10.2020 ಮತ್ತು ತಿದ್ದುಪಡಿ ಸುತ್ತೋಲೆ ಸಂಖ್ಯೆ: ಕಂಇ 33 ಟಿಆರ್ ಎಂ 2019(ಇ), ದಿನಾಂಕ: 10.01.2024 ರಂತೆ ಪೌತಿ / ವಾರಸಾ ಖಾತೆ ಆಂದೋಲನವನ್ನು ನಡೆಸಲು ಸರ್ಕಾರದ ವತಿಯಿಂದ ಸುತ್ತೋಲೆಗಳನ್ನು ಹೊರಡಿಸಲಾಗಿದ್ದು, ಪೌತಿ ಖಾತೆಗಾಗಿ ಅರ್ಜಿಗಳನ್ನು ಸ್ವೀಕರಿಸಲು ಭೂಮಿ ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಲಾಗಿರುತ್ತದೆ ಹಾಗೂ ಪೌತಿ ಖಾತೆಗೆ ಅರ್ಜಿ ಸ್ವೀಕರಿಸಲು ಬೇಕಾದ ದಾಖಲೆಗಳನ್ನು ಕೂಡ ಸರಳೀಕರಣಗೊಳಿಸಲಾಗಿದೆ.<br><br>ಮುಂದುವರೆದು, ಸರ್ಕಾರದ ಆದೇಶ ಸಂಖ್ಯೆ: ಕಂಇ95ಎಂಆರ್ ಆರ್ 2025 ದಿನಾಂಕ:21-04-2025 ರಂತೆ ಮರಣ ಹೊಂದಿದ ಖಾತೆದಾರರ ವಾರಸುದಾರರ ಹೆಸರಿಗೆ ಖಾತಾ ಪಹಣಿ ಇಂಡೀಕರಣ ಮಾಡುವ ನಿಟ್ಟಿನಲ್ಲಿ, ಕಂದಾಯ ಇಲಾಖೆಯ ಮೂಲಕ ಇ-ಪೌತಿ ತಂತ್ರಾಂಶವನ್ನು ನೀಡಲಾಗಿರುತ್ತದೆ. ಸದರಿ ತಂತ್ರಾಂಶದಲ್ಲಿ ಗ್ರಾಮ ಆಡಳಿತ ಅಧಿಕಾರಿಗಳು ಮರಣ ಹೊಂದಿದ ವಾರಸುದಾರರನ್ನು ಖಾತೆಯಲ್ಲಿ ನಮೂದು ಮಾಡಲು ಆಧಾರ್ e-KYC ಹಾಗೂ ವಂಶವೃಕ್ಷ ಕಡ್ಡಾಯವಾಗಿರುತ್ತದೆ.<br><br>ಮುಂದುವರೆದು, ಮರಣ ಪ್ರಮಾಣ ಪತ್ರ ಅಥವಾ ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ ಮರಣ ಕುರಿತು ಪಡೆದ ಆದೇಶ ಅಥವಾ ವಾರಸ್ಸುದಾರರ ಅಫಿಡವಿಟ್ ಮತ್ತು ಗ್ರಾಮಾ ಆಡಳಿತಾಧಿಕಾರಿಗಳು ಹಾಗೂ ರಾಜಸ್ವ ನಿರೀಕ್ಷಕರ ಮಹಜರ್ ಮೇಲೆ (ಮರಣ ಪ್ರಮಾಣ ಪತ್ರ ಅಥವಾ ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ ಮರಣದ ಕುರಿತು ಪಡೆದ ಆದೇಶ ಪಡೆಯಲು ಅಡೆ-ತಡೆಗಳಿದ್ದ ಸಂದರ್ಭದಲ್ಲಿ) ಪೌತಿ ಖಾತೆ ಮಾಡಲು ಕ್ರಮವಹಿಸಲಾಗುತ್ತಿದೆ.<br><br>ಇ-ಪೌತಿ ತಂತ್ರಾಂಶದ ಮೂಲಕ ಗ್ರಾಮ ಆಡಳಿತಾಧಿಕಾರಿಗಳು ಪೌತಿ ಖಾತೆ ಮಾಡಲು ಸಂಬಂಧಪಟ್ಟ ರೈತರ ಮನೆ ಬಾಗಿಲಿಗೆ ಸ್ವಯಂಪ್ರೇರಿತವಾಗಿ |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| | | ತೆರಳಿ ದಾಖಲೆಗಳನ್ನು ಪಡೆದು ಆಂದೋಲನದ ರೂಪದಲ್ಲಿ ಪೌತಿ ಖಾತೆ ಪ್ರಗತಿ ಸಾಧಿಸಲು ಕ್ರಮವಹಿಸಲಾಗುತ್ತಿದೆ. |
| ಆ | ಈ ಯೋಜನೆಯು ಜಾರಿಯಾದಾಗಿನಿಂದ ರಾಜ್ಯದಲ್ಲಿ ಸಾಧಿಸಿರುವ ಪ್ರಗತಿ ಎಷ್ಟು: ಮುಖ್ಯವಾಗಿ ಬಾಗಲಕೋಟೆ ಮತ್ತು ವಿಜಯಪುರ ಜಿಲ್ಲೆಯಲ್ಲಿ ಪೌತಿ ಖಾತೆಯು ಸಾಧಿಸಿರುವ ಪ್ರಗತಿಯೇನು: (ತಾಲೂಕುವಾರು ಮತ್ತು ಜಿಲ್ಲೆವಾರು ಮಾಹಿತಿ ನೀಡುವುದು); | ರಾಜ್ಯದಲ್ಲಿ ಆಧಾರ್ ಸೀಡಿಂಗ್ ಅಭಿಯಾನದಡಿ ಪಹಣಿಗಳಿಗೆ ಆಧಾರ್ ಜೋಡಣೆ ಕಾರ್ಯ ಮಾಡುವಾಗ ಒಟ್ಟು 50,23,308 ಜಮೀನು ಮಾಲೀಕರನ್ನು ಮೃತ ಹೊಂದಿರುವುದಾಗಿ ಗ್ರಾಮ ಆಡಳಿತಾಧಿಕಾರಿಗಳು ಗುರುತಿಸಿರುತ್ತಾರೆ. (ಒಬ್ಬ ವ್ಯಕ್ತಿಯು 1 ಕ್ಕಿಂತ ಹೆಚ್ಚು ಜಮೀನುಗಳನ್ನು ಹೊಂದಿರಬಹುದು ಆದ್ದರಿಂದ ರಾಜ್ಯದಲ್ಲಿ ಒಟ್ಟು ಪೌತಿಯಾಗಿರುವ ಜಮೀನಿನ ಮಾಲೀಕರು ಒಟ್ಟು 50,23,308 ಕ್ಕಿಂತ ಕಡಿಮೆ ಇರುತ್ತಾರೆ) ಇವುಗಳಲ್ಲಿ ಜೂನ್ 2023ರಿಂದ ಡಿಸೆಂಬರ್ 2025 ರವರೆಗೆ ಒಟ್ಟು 10,78,570 ಭೂಮಿ ಕಿಯೋಸ್ಕ್ ಮೂಲಕ ಪೌತಿ ಖಾತೆ ಮಾಡಲಾಗಿರುತ್ತದೆ. ಹಾಗೂ ಜುಲೈ 2025 ರಿಂದ ಒಟ್ಟು ಗ್ರಾಮ ಆಡಳಿತಾಧಿಕಾರಿಗಳು 5,29,218 ಪೌತಿ ಖಾತೆ ಮಾಡಲು ಪ್ರಕ್ರಿಯೆಯನ್ನು ಇ-ಪೌತಿ ತಂತ್ರಾಂಶದಲ್ಲಿ ಪೂರ್ಣಗೊಳಿಸಿ ರಾಜಸ್ವ ನಿರೀಕ್ಷಕರ ಅನುಮೋದನೆಗೆ ಸಲ್ಲಿಸಿರುತ್ತಾರೆ. ಇದರಲ್ಲಿ 3,85,610 ಇ-ಪೌತಿ ತಂತ್ರಾಂಶದ ಮೂಲಕ ಪೌತಿ ಖಾತೆ ಮಾಡಲಾಗಿರುತ್ತದೆ. ಉಳಿದ 1,43,608 ಸಂಬಂಧಿಸಿದಂತೆ ರಾಜಸ್ವ ನಿರೀಕ್ಷಕರು ಮತ್ತು ಶಿರಸ್ತೇದಾರರ ಅನುಮೋದನೆ ಹಾಗೂ 15 ದಿನಗಳ ನೋಟಿಸ್ ಅವಧಿ ಹಂತದಲ್ಲಿ ಬಾಕಿ ಇರುತ್ತವೆ.<br><br>(ರಾಜ್ಯದಲ್ಲಿ ಸಾಧಿಸಿರುವ ಪ್ರಗತಿಗೆ ಸಂಬಂಧಿಸಿದಂತೆ ಜಿಲ್ಲಾವಾರು ವಿವರವನ್ನು **ಅನುಬಂಧ-1 ರಲ್ಲಿ** ಹಾಗೂ ಬಾಗಲಕೋಟೆ ಮತ್ತು ವಿಜಯಪುರ ಜಿಲ್ಲೆಗೆ ಸಂಬಂಧಿಸಿದಂತೆ ತಾಲ್ಲೂಕುವಾರು ವಿವರವನ್ನು **ಅನುಬಂಧ-2 ರಲ್ಲಿ** ಲಗತ್ತಿಸಿದೆ.) |
| ಇ | ಸದರಿ ಯೋಜನೆಯ ಪ್ರಗತಿಯನ್ನು ತೀವ್ರಗೊಳಿಸಲು ಸರ್ಕಾರ ಹಾಕಿಗೊಂಡಿರುವ ಕ್ರಮಗಳೇನು? | ಇ-ಪೌತಿ ಯೋಜನೆಯ ಪ್ರಗತಿಯನ್ನು ತೀವ್ರಗೊಳಿಸಲು ಸರ್ಕಾರವು ಆಗಿಂದಾಗ್ಗೆ ಪ್ರಗತಿ ಪರಿಶೀಲನಾ ಸಭೆ ನಡೆಸುವ ಮೂಲಕ ಅಧಿಕಾರಿಗಳು ಮತ್ತು ಸಿಬ್ಬಂದಿಗಳಿಗೆ ತ್ವರಿತಗತಿಯಲ್ಲಿ ಪ್ರಕರಣಗಳನ್ನು ಇತ್ಯರ್ಥಪಡಿಸಲು ನಿರ್ದೇಶನಗಳನ್ನು ನೀಡಲಾಗುತ್ತಿದೆ.<br><br>ಮುಂದುವರೆದು, ಎಲ್ಲಾ ಗ್ರಾಮ ಆಡಳಿತಾಧಿಕಾರಿಗಳಿಗೆ ಇ-ಪೌತಿ ಮೊಬೈಲ್ ಆಪ್ ಅಭಿವೃದ್ಧಿಪಡಿಸಿ ನೀಡಲಾಗಿದ್ದು, ಸಂಬಂಧಪಟ್ಟ ರೈತರ ಮನೆ ಬಾಗಿಲಿಗೆ ಸ್ವಯಂಪ್ರೇರಿತವಾಗಿ ತೆರಳಿ ದಾಖಲೆಗಳನ್ನು ಪಡೆದು ಆಂದೋಲನದ ರೂಪದಲ್ಲಿ ಪೌತಿ ಖಾತೆ ಪ್ರಗತಿ ಸಾಧಿಸಲು ಕ್ರಮವಹಿಸಲಾಗುತ್ತಿದೆ. |

**ಕಂಇ 34 ಎಂಆರ್‌ಆರ್ 2026**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು

## ಅನುಬಂಧ-1

ರಾಜ್ಯದಲ್ಲಿ ಸಾಧಿಸಿರುವ ಪ್ರಗತಿಗೆ ಸಂಬಂಧಿಸಿದಂತೆ ಜಿಲ್ಲಾವಾರು ವಿವರ

**(ಪೌತಿ ವರದಿ 23.01.2026 ರಂತೆ)**

| ಪೌತಿ (ಆಫ್ ಲೈನ್) | | | ಇ-ಪೌತಿ ತಂತ್ರಾಂಶದ ಮೂಲಕ | |
|---|---|---|---|---|
| ಕ್ರ.ಸಂ. | ಜಿಲ್ಲೆ | ಜೂನ್ 2023 ರಿಂದ ಡಿಸೆಂಬರ್ 2025 ರವರೆಗೆ ಪೌತಿ ವಹಿವಾಟಿನಲ್ಲಿ ಒಳಗೊಂಡಿರುವ ಒಟ್ಟು ಸರ್ವೆ ನಂಬರ್ ಗಳು | ಇ-ಪೌತಿ ತಂತ್ರಾಂಶದಲ್ಲಿ ಗ್ರಾಮ ಆಡಳಿತ ಅಧಿಕಾರಿಗಳು ಪೂರ್ಣಗೊಳಿಸಿರುವ | ಭೂಮಿ ತಂತ್ರಾಂಶದಲ್ಲಿ ವಹಿವಾಟಿನಲ್ಲಿ ಒಳಗೊಂಡಿರುವ ಒಟ್ಟು ಸರ್ವೆ ನಂಬರ್ ಗಳು |
| 1 | ಬೆಳಗಾವಿ | 112361 | 38453 | 21978 |
| 2 | ಬಾಗಲಕೋಟೆ | 26069 | 9069 | 6054 |
| 3 | ವಿಜಯಪುರ | 25039 | 6443 | 4908 |
| 4 | ಕಲಬುರಗಿ | 29587 | 13619 | 11730 |
| 5 | ಬೀದರ್ | 15501 | 14155 | 11221 |
| 6 | ರಾಯಚೂರು | 21241 | 12585 | 10058 |
| 7 | ಕೊಪ್ಪಳ | 18620 | 12032 | 9956 |
| 8 | ಗದಗ | 9950 | 7918 | 6401 |
| 9 | ಧಾರವಾಡ | 18609 | 15804 | 8047 |
| 10 | ಉತ್ತರ ಕನ್ನಡ | 51755 | 23304 | 13961 |
| 11 | ಹಾವೇರಿ | 29660 | 11126 | 8112 |
| 12 | ಬಳ್ಳಾರಿ | 16256 | 11160 | 9288 |
| 13 | ಚಿತ್ರದುರ್ಗ | 29846 | 21830 | 16881 |
| 14 | ದಾವಣಗೆರೆ | 25306 | 11990 | 9010 |
| 15 | ಶಿವಮೊಗ್ಗ | 24173 | 18635 | 15040 |
| 16 | ಉಡುಪಿ | 56981 | 13821 | 9585 |
| 17 | ಚಿಕ್ಕಮಗಳೂರು | 27338 | 15628 | 12254 |
| 18 | ತುಮಕೂರು | 93059 | 46409 | 38537 |
| 19 | ಕೋಲಾರ | 37275 | 19574 | 15097 |
| 20 | ಬೆಂಗಳೂರು | 10974 | 1049 | 789 |
| 21 | ಬೆಂಗಳೂರು ಗ್ರಾಮಾಂತರ | 22213 | 10152 | 7951 |
| 22 | ಮಂಡ್ಯ | 88235 | 52639 | 40968 |
| 23 | ಹಾಸನ | 62677 | 25386 | 18415 |
| 24 | ದಕ್ಷಿಣ ಕನ್ನಡ | 49458 | 7644 | 5733 |
| 25 | ಕೊಡಗು | 15508 | 11248 | 6192 |
| 26 | ಮೈಸೂರು | 45779 | 26389 | 17911 |
| 27 | ಚಾಮರಾಜನಗರ | 19103 | 11106 | 9071 |
| 28 | ಚಿಕ್ಕಬಳ್ಳಾಪುರ | 23602 | 22878 | 10861 |
| 29 | ಬೆಂಗಳೂರು ದಕ್ಷಿಣ | 28097 | 13824 | 11251 |
| 30 | ಯಾದಗಿರಿ | 22331 | 10801 | 8095 |
| 31 | ವಿಜಯನಗರ | 21967 | 12547 | 10255 |
| | ಒಟ್ಟು | **1078570** | **529218** | **385610** |

# ಅನುಬಂಧ-2

(ಬಾಗಲಕೋಟೆ ಜಿಲ್ಲೆಯ ತಾಲ್ಲೂಕುವಾರು ವರದಿ)

| ಕ್ರ.ಸಂ | ತಾಲ್ಲೂಕು | ಇ-ಪೌತಿ ತಂತ್ರಾಂಶದಲ್ಲಿ ಗ್ರಾಮ ಆಡಳಿತ ಅಧಿಕಾರಿಗಳು ಪೂರ್ಣಗೊಳಿಸಿರುವ ಅರ್ಜಿಗಳು | ಭೂಮಿ ತಂತ್ರಾಂಶದಲ್ಲಿ ವಹಿವಾಟಿನಲ್ಲಿ ಒಳಗೊಂಡಿರುವ ಒಟ್ಟು ಸರ್ವೆ ನಂಬರ್ ಗಳು |
|---|---|---|---|
| 1 | ಜಮಖಂಡಿ | 1057 | 797 |
| 2 | ಬೀಳಗಿ | 1820 | 502 |
| 3 | ಮುಧೋಳ | 906 | 730 |
| 4 | ಬಾದಾಮಿ | 1744 | 1287 |
| 5 | ಬಾಗಲಕೋಟೆ | 907 | 722 |
| 6 | ಹುನಗುಂದ | 801 | 660 |
| 7 | ಗುಳೇದಗುಡ್ಡ | 412 | 285 |
| 8 | ಇಲಕಲ್ಲ | 703 | 555 |
| 9 | ರಬಕವಿ ಬನಹಟ್ಟಿ | 719 | 516 |
| | ಒಟ್ಟು | **9069** | **6054** |

(ವಿಜಯಪುರ ಜಿಲ್ಲೆಯ ತಾಲ್ಲೂಕುವಾರು ವರದಿ)

| ಕ್ರ.ಸಂ | ತಾಲ್ಲೂಕು | ಇ-ಪೌತಿ ತಂತ್ರಾಂಶದಲ್ಲಿ ಗ್ರಾಮ ಆಡಳಿತ ಅಧಿಕಾರಿಗಳು ಪೂರ್ಣಗೊಳಿಸಿರುವ ಅರ್ಜಿಗಳು | ಭೂಮಿ ತಂತ್ರಾಂಶದಲ್ಲಿ ವಹಿವಾಟಿನಲ್ಲಿ ಒಳಗೊಂಡಿರುವ ಒಟ್ಟು ಸರ್ವೆ ನಂಬರ್ ಗಳು |
|---|---|---|---|
| 1 | ವಿಜಯಪುರ | 558 | 417 |
| 2 | ಇಂಡಿ | 696 | 590 |
| 3 | ಸಿಂದಗಿ | 627 | 530 |
| 4 | ಬಸವನ ಬಾಗೇವಾಡಿ | 691 | 603 |
| 5 | ಮುದ್ದೇಬಿಹಾಳ | 954 | 732 |
| 6 | ನಿಡಗುಂದಿ | 487 | 378 |
| 7 | ಬಬಲೇಶ್ವರ | 593 | 474 |
| 8 | ಚಡಚಣ | 421 | 185 |
| 9 | ತಾಳಿಕೋಟಿ | 545 | 298 |
| 10 | ತಿಕೋಟಾ | 253 | 189 |
| 11 | ಕೋಲ್ಹಾರ | 252 | 207 |
| 12 | ದೇವರ ಹಿಪ್ಪರಗಿ | 201 | 188 |
| 13 | ಆಲಮೇಲ | 165 | 117 |
| | ಒಟ್ಟು | **6443** | **4908** |